ಶ್ರೀ ಅರಗ ಜ್ಞಾನೇಂದ್ರ : ಎಷ್ಟು ದಿನಗಳಲ್ಲಿ ಮಾಡುತ್ತೀರಿ?

ಶ್ರೀ ರಮೇಶ್ ಜಿ. ಜಿಗಜಿಣಗಿ : ಎಷ್ಟು ಸಾಧ್ಯವೋ ಅಷ್ಟು ಬೇಗ ಮಾಡುತ್ತೇವೆ.

ಉಪಾಧ್ಯಕ್ಷರು : ತಾವು ಏಕೆ ಕೇಳುತ್ತೀರಿ. ಇದು ಮಂಜುನಾಥ್ ಅವರ ಪ್ರಶ್ನೆ ಇದೆ. ತಾವು ಪದೆಪದೇ ಏಕೆ ಕೇಳುತ್ತೀರಿ?

ಶ್ರೀ ಅರಗ ಜ್ಞಾನೇಂದ್ರ : ಇದು ನಮ್ಮ ಮೂರೂ ತಾಲ್ಲೂಕುಗಳಲ್ಲಿ ಆಗಿದೆ.

ಶ್ರೀ ರಮೇಶ್ ಜಿ. ಜಿಗಜಿಣಗಿ : ನಿಮಗೆ ತೊಂದರೆಯಾದದ್ದು ಸರ್ಕಾರದ ಗಮನಕ್ಕೆ ಬಂದಿದೆ. ಎಷ್ಟು ಸಾಧ್ಯ ಇದೆಯೋ ಅಷ್ಟು ಬೇಗ ವರದಿಯನ್ನು ತರಿಸಿ ಅದರ ಮೇಲೆ ನಾನು ಕ್ರಮ ತೆಗೆದುಕೊಳ್ಳುತ್ತೇನೆ.

(ಮಾನ್ಯ ಅಧ್ಯಕ್ಷರು ತಮ್ಮ ಪೀಠದಲ್ಲಿ ಉಪಸ್ಥಿತರಾದರು)

ನಿಯಮ 69ರ ಪ್ರಕಾರ ಚರ್ಚೆ

ಅ) ಕೊಳ್ಳೇಗಾಲ ತಾಲ್ಲೂಕಿನ ಕುಂತೂರು ಮಹದೇಶ್ವರ ಸಕ್ಕರೆ ಕಾರ್ಖಾನೆ ಹಾಗೂ ರಾಜ್ಯದ ಇತರೆ ಕಾರ್ಖಾನೆಗಳು ರೈತರಿಗೆ ಎರಡು ವರ್ಷಗಳಿಂದ ಕೊಡಬೇಕಾಗಿರುವ ಹಣದ ಬಗ್ಗೆ.

+ಶ್ರೀ ಕೆ.ಎಸ್. ಪುಟ್ಟಣ್ಣಯ್ಯ (ಪಾಂಡುಪುರ) : ಸನ್ಮಾನ್ಯ ಅಧ್ಯಕ್ಷರೇ, ಈಗಾಗಲೇ ಈ ಸದನದಲ್ಲಿ ಬಹಳ ಸಾರ ಈ ವಿಷಯ ಚರ್ಚೆಯಾಗಿದೆ. ಸರ್ಕಾರ ಅದರ ಬಗ್ಗೆ ಏನೂ ಕ್ರಮ ತೆಗೆದುಕೊಂಡಿಲ್ಲ. ಮಹದೇಶ್ವರ ಸಕ್ಕರೆ ಕಾರ್ಖಾನೆ ನಿಂತು, ಎರಡು ವರ್ಷ ಆಯಿತು. ಪ್ರದೇಶ 454 ಎಕರೆ. ಸುಮಾರು ಒಟ್ಟು ಬಾಕಿ ಬರಬೇಕಾಗಿರುವುದು 11 ಕೋಟಿ 28 ಲಕ್ಷ ರೂಪಾಯಿ. ಈಗಾಗಲೇ ಬಾಕಿ ಬಂದಿರುವುದು 8 ಕೋಟಿ 24 ಲಕ್ಷ. ಬಾಕಿ ಕೊಡಬೇಕಾಗಿರುವುದ 3 ಕೋಟಿ 40 ಲಕ್ಷ. ಈಗಾಗಲೇ 620 ಜನಕ್ಕೆ ಚೆಕ್ ಕೊಟ್ಟು, ಚೆಕ್ ಬೌನ್ಸ್ ಆಗಿದೆ. ಎರಡು ವರ್ಷದಿಂದ ಅಲ್ಲಿ ಸುಮಾರು 600 ರಿಂದ 650 ಜನ ಕಾರ್ಮಿಕರು ಕೆಲಸ ಇಲ್ಲದೆ ತಿರುಗತಕ್ಕಂಥ ಒಂದು ವ್ಯವಸ್ತೆ ಇದೆ. ಈಗಾಗಲೇ ರೈತರು 14ನೇ ತಾರೀಖಿನಿಂದ ಬಾಕಿಗೋಸ್ಕರ ಚಳುವಳಿ ಮಾಡಿ, ಇದೇ ತಿಂಗಳು 14ನೇ ತಾರೀಖು ಚಿಮಣಿಮೇಲೆ ಹತ್ತಿರತಕ್ಕಂಥ ರೈತರ ಜೊತೆಯಲ್ಲಿ, ಜಿಲ್ಲಾಧಿಕಾರಿ, ಸೂಪರಿಂಟೆಂಡೆಂಟ್ ಆಫ್ ಪೋಲೀಸ್ ನವರು ಬಂದು ಒಂದು ವಾರದೊಳಗೆ ರೈತರಿಗೆ ಕೊಡಬೇಕಾದಂಥ ಬಾಕಿಯನ್ನು ಕೊಡಿಸುತ್ತೇವೆ ಎಂದು ಹೇಳಿ, ಒಬ್ಬ ನಿರ್ಗತಿಕ, ಏನೂ ಇಲ್ಲದೇ ಇರುವವನು ಬಹಳ ತೊಂದರೆಯಲ್ಲಿರತಕ್ಕಂಥ, ಮೊನ್ನೆ ಆಶ್ರಯ ಮನೆಯಲ್ಲಿ ಒಂದು ಸೈಟು ಕೊಟ್ಟಂಥವನಿಗೆ, ಈ ದುಡ್ಡು ಕೊಡದೇನೆ ಭಾರಿ ತೊಂದರೆ ಪಡುತ್ತಾ ಇದ್ದಾರೆ. ಸರ್ಕಾರ ಎರಡು ವರ್ಷದಿಂದ ಮೌನವಾಗಿದೆ. ಎರಡು ವರ್ಷದಿಂದ ಕಬ್ಬು ಬೆಳೆಗಾರರು ಎಷ್ಟೊಂದು ತೊಂದರೆಯನ್ನು ಅನುಭವಿಸಿದ್ದಾರೆ, ಅದೇ ಸಹಕಾರಿ ಕ್ಷೇತ್ರದಲ್ಲಿದ್ದಂಥ ಕಾರ್ಖಾನೆ ಖಾಸಗಿ ಕ್ಷೇತ್ರಕ್ಕೆ ಹೋದಮೇಲೆ ರೈತರಿಗೆ ಆದ ಅನುಕೂಲತೆ, ಅನಾನುಕೂಲತೆ ಬಗ್ಗೆ ಸರ್ಕಾರ ಯಾವುದೇ ಕ್ರಮ ತೆಗೆದುಕೊಂಡಿಲ್ಲ. ಈಗ ನೀವು ಎಷ್ಟೋ ಟೀಕೆ ಓವರ್ ಮಾಡುತ್ತೇವೆ ಎಂದಿರಿ. ಟೇಕ್ ಓವರೂ

ಆಗಲಿಲ್ಲ. ಅವನ ಮೇಲೆ ಟೈಟೂ ಮಾಡಲಿಲ್ಲ, ಕೊನೆಗೂ ಫೈಟೂ ಆಗಲಿಲ್ಲ, ನಾವು ವೇಟ್ ಮಾಡಿ ಎಲ್ಲ ಲೈಟಪ ಆಗಿಹೋಯಿತು. ಆದ್ದರಿಂದ ತಾವು ದಯವಿಟ್ಟು ಗಂಭೀರವಾಗಿ, ಇದೊಂದೇ ಅಲ್ಲ, ಇದೇ ರೀತಿ ಚಾಮುಂಡೇಶ್ವರಿ ಕಾರ್ಖಾನೆ 25 ಕೋಟಿ, ಶ್ರೀರಾಮಸಕ್ಕರೆ ಕಾರ್ಖಾನೆ ಬಾಕಿ ಕೊಡಬೇಕು, ಮಾತನಾಡಿದ್ದಂತೆ ಕೊಟ್ಟಿಲ್ಲ. ಬೀದರ್ ಸಕ್ಕರೆ ಕಾರ್ಖಾನೆ 7 ಕೋಟಿ. ಮೊನ್ನೆ ಹಳ್ಳಿಬೇಡನಂಥ ಕಾರ್ಖಾನೆಯಲ್ಲಿ ಸುಮಾರು18 ಕೋಟಿ ಅವ್ಯವಹಾರ ಆಗಿದೆ. ಕರ್ನಾಟಕದಲ್ಲಿ 17 ಸಹಕಾರಿ ಸಕ್ಕರೆ ಕಾರ್ಖಾನೆಗಳು ಇವೆ. 9 ಖಾಸಗಿ ಸಕ್ಕರೆ ಕಾರ್ಖಾನೆ, 2 ಜಂಟಿ ಕ್ಷೇತ್ರದ ಕಾರ್ಖಾನೆ, 2 ಸರ್ಕಾರಿ ಕಾರ್ಖಾನೆ. ಒಟ್ಟು 30 ಕಾರ್ಖಾನೆಗಳಲ್ಲಿ ಆಗಿರತಕ್ಕಂಥ ವ್ಯವಹಾರಗಳ ಬಗ್ಗೆ ಹೈಪರ್/ಕಮಿಟಿ ಚೇರ್ಮನ್ನರು ಮಾನ್ಯ ಮುಖ್ಯಮಂತ್ರಿಗಳು. ಸುಮಾರು 9 ತಿಂಗಳಿಂದ ಇದುವರೆಗೂ ಯಾವುದೇ ಮೀಟಿಂಗನ್ನು ಕರೆದಿಲ್ಲ. ಸರ್ಕಾರಕ್ಕೆ ನಿಜವಾಗಿ ಕಬ್ಬುಬೆಳೆಗಾರರಿಗೆ ಅವರ ಬಗ್ಗೆ ಅತ್ಯಂತ ಗಂಭೀರವಾಗಿ ಚಿಂತನೆ ಮಾಡಬೇಕು ಎನ್ನತಕ್ಕಂಥ ಆಸೆ ನಿಮಗಿದ್ದರೆ, ದಯವಿಟ್ಟು ಈ ವಾರದಲ್ಲಿ ಎಲ್ಲಾ ಕಾರ್ಖಾನೆಗಳ ಮೀಟಿಂಗ್ ಅನ್ನು ಕರೆಯಬೇಕು. ತಾವು ಏನು ಬೆಲೆಯನ್ನು ನಿಗದಿ ಮಾಡಿದ್ದೀರಿ, 8.5ಕ್ಕೆ, ಆ ಬೆಲೆಯನ್ನು ಪುನರ್ ಪರಿಶೀಲನೆ ಮಾಡಿ ತಾವು ಆಯಾಯ ರಿಕವರಿ ಆಧಾರದಮೇಲೆ ಒಂದು ಬೆಲೆಯನ್ನು ನಿಗದಿ ಮಾಡತಕ್ಕಂಥ ವ್ಯವಸ್ಥ ಮಾಡಬೇಕು. ಮತ್ತೆ ಈಗಾಗಲೇ ಲೆವಿ ಬೆಲೆ, 9 ರೂಪಾಯಿ ಇದ್ದದ್ದು, 10 ರೂಪಯಿ 50 ಪೈಸೆಯಾಗಿದೆ. ಈಗ ಲೆವಿ ಬೆಲೆ ಜಾಸ್ತಿಯಾಗಿದೆ. ಆದ್ದರಿಂದ ಎಲ್ಲಾ ಕಾರ್ಖಾನೆಗಳ ಮೀಟಿಂಗನ್ನು ಕರೆದು ಇನ್ನು ಒಂದು ವಾರದೊಳಗೆ ಬೆಲೆ ನಿಗದಿ ಮಾಡಿಕೊಡಬೇಕು. ರೈತರಿಗೆ ಬಾಕಿ ಬರಬೇಕಾಗಿರದ್ದರ ಬಗ್ಗೆ ಚರ್ಚೆಯಾಗಬೇಕು. ದಯವಿಟ್ಟು ಈ ಮೂರು ವಿಷಯಗಳ ಬಗ್ಗೆ ತಾವು ಅತ್ಯಂತ ಗಂಭೀರವಾಗಿ ಚರ್ಚೆಮಾಡಬೇಕು. ಏಕೆಂದರೆ, ರೈತರ ಸುದ್ದಿಯನ್ನೇ ತಾವು ಮಾತನಾಡಿಕೊಂಡು ಬಂದಿದ್ದೀರಿ. ಇದುವರೆಗೂ ಯಾವುದೇ ಗಮನ ತೆಗೆದುಕೊಂಡಿಲ್ಲ. ಅದರಲ್ಲೂ ಖೋಡೇಸ್ ನಂಥವರು, ಎರಡು ವರ್ಷವಾದರೂ ನೀವು ಟೀಕ್ ಓವರ್ ಮಾಡಿಕೊಳ್ಳುವುದಕ್ಕೆ ಏನು ತೊಂದರೆ ಇದೆ? ಏನು ಕಾರಣ ಅಂತ ಗೊತ್ತಾಗಲಿಲ್ಲ. ಖಾಸಗೀಕರಣವೋ ಇಲ್ಲ ನೀವೆಲ್ಲರೂ ಖೋಡಿಸೀಕರಣ ಆಗಿಬಿಟ್ಟಿದ್ದೀರೋ ಎಂದು ತಾವು ನನಗೆ ಹೇಳಬೇಕು. ಎಷ್ಟು ಸಲ ಚರ್ಚೆ ಮಾಡುವುದು? ಮಾನ್ಯ ಅಧ್ಯಕ್ಷರೇ, ತಮ್ಮ ಸಮ್ಮುಖದಲ್ಲ ಗಂಭೀರವಾಗಿ ಎಷ್ಟೊಂದು ಸಲ ಚರ್ಯೆಯಾದರೂ, ಗಂಭೀರವಾಗಿ ಸರ್ಕಾರ ಇದನ್ನು ಪರಿಗಣಿಸದೇ ಇದ್ದರೆ, ಖೋಡೆಸನ್ನು ಕಂಡರೆ ಏಕೆ ಹೆದರಿಕೊಳ್ಳುತ್ತಿದ್ದಾರೆ ಎಂದು ನನಗೆ ಅರ್ಥವಾಗುತ್ತಿಲ್ಲ. ಕಬ್ಬು ಬೆಲೆಗಾರರು ಬೀದಿ ಭಿಕಾರಿಗಳಾಗಿದ್ದಾರೆ ಅವರುಗಳ ದುಸ್ಥಿತಿ ಹೇಳುವುದಕ್ಕೆ ಅಸಾಧ್ಯ. ತಮ್ಮ ಒಡವೆಗಳನ್ನು ಬಿಡಿಸಿಕೊಳ್ಳುವುದಕ್ಕೋಸ್ಕರ, ಅವನ ಮನೆ ಹತ್ತಿರಕ್ಕೆ ಹೋಗಿ ನಮ್ಮ ಒಡವೆಗಳನ್ನು ಹರಾಜು ಬಿಡಿಸಿಕೊಳ್ಳುವುದಕ್ಕೋಸ್ಕರ, ಅವನ ಮನೆ ಹತ್ತಿರಕ್ಕೆ ಹೋಗಿ ನಮ್ಮ ಒಡವೆಗಳನ್ನು ಹರಾಜು ಹಾಕತಕ್ಕಂಥ ಪರಿಸ್ಥಿತಿ ಬಂದಿದೆ ಅಂತ ಹೇಳಿದರೆ ಅವನನ್ನು ಗೇಟಿನೊಳಗೆ ಸೇರಿಸದೆ ಹೊದೆದೋಡಿಸಿದ ವ್ಯವಸ್ಥೆ. ಯಾರಿಗೆ ಇನಪ್ಲುಯೆನ್ಸ ಇದೆ ಅಂಥವರಿಗೆ ಕೆಲವರಿಗೆ ಪೇಮೆಂಟ್ ಆಗಿದೆ. ತಾವು ಗಂಭೀರವಾಗಿ ಸರ್ಕಾರ ಇದಕ್ಕೆ ಉತ್ತರ ಕೊಡಬೇಕು. ಸರ್ಕಾರ ಉತ್ತರ ಸರಿಯಾಗಿ ಕೊಡದೇ ಇದ್ದರೆ, ರೈತರು ಮುಂದಿನ ಕಾರ್ಯಕ್ರಮವನ್ನು ರೂಪಿಸಿಕೊಳ್ಳಬೇಕಾಗುತ್ತದೆ. ಸರ್ಕಾರ ಮಧ್ಯಸ್ಥಿಕೆಗೆ ಬಂದು ತಾವು ಎಲ್ಲವನ್ನೂ ಕೊಡಿಸುತ್ತೇವೆ ಎಂದು ಹೇಳಿದಿರಿ. ಆದರೆ

ಇದುವರೆಗೂ ಏನೂ ಆಗಲಿಲ್ಲ. ಮಾನ್ಯ ಅಧ್ಯಕ್ಷರೇ, ದಯವಿಟ್ಟು ಸರ್ಕಾರ ಇದರ ಬಗ್ಗೆ ಗಂಭೀರವಾಗಿ ಒಂದು ತೀರ್ಮಾನ ಮಾಡಬೇಕು. ಮೂರು ವಿಷಯಗಳನ್ನು ನಾವು ಸರ್ಕಾರದ ಮುಂದೆ ಇಟ್ಟಿದ್ದೇವೆ. ಎಲ್ಲಾ ಕಾರ್ಖಾನೆಗಳ ಮೀಟಿಂಗ್ ಕರೆದು, ದಯವಿಟ್ಟು ರೈತರಿಗೆ ಕೊಡಬೇಕಾಗಿರತಕ್ಕಂಥ ಬಾಕಿಯನ್ನು ಕೊಡಿಸಿಕೊಡಬೇಕು. ಇದು ಒಂದು ಎರಡನೆಯದು, ಸರ್ಕಾರ ಆರುನೂರು ರೂಪಾಯಿ ಕೊಡಿ ಎಂದು ಮುಗುಂ ಆಗಿ ಹೇಳಿರತಕ್ಕಂಥಾದ್ದು ವೈಜ್ಞಾನಿಕವಾಗಿ ಚಿಂತನೆ ಮಾಡದೇ ಇರುವುದರಿಂದ, ವೈಜ್ಞಾನಿಕವಾಗಿ ಎಲ್ಲಾ ಕಾರ್ಖಾನೆಗಳಲ್ಲಿ ಚರ್ಚೆಮಾಡಿ, ಕೇಂದ್ರ ಸರ್ಕಾರದವರು ಈಗ ಲೆವಿ ಬೆಲೆಯನ್ನು ಏರಿಸಿದ್ದಾರೆ. ಅದೆಲ್ಲವನ್ನು ಕೂಲಂಕುಷವಾಗಿ ಪರಿಶೀಲನೆ ಮಾಡಿ ಒಂದು ವೈಜ್ಞಾನಿಕ ಬೆಲೆ ಕೊಡತಕ್ಕಂಥ ವ್ಯವಸ್ಥೆ ಮಾಡಬೇಕು.

ಮೂರನೆಯದು ಕಾರ್ಖಾನೆಗಳ ದುಸ್ಥಿತಿ ಬಗ್ಗೆ ಚರ್ಚೆ ಮಾಡಬೇಕು. ಈ ಮೂರು ವಿಷಯಗಳನ್ನು ಮಾನ್ಯಮುಖ್ಯಮಂತ್ರಿಗಳು ಹೈಪವರ ಕಮಿಟಿ ಚೇರ್ಮನ್ ಆಗಿ, ಸಂಬಂಧಪಟ್ಟ ಸಕ್ಕರೆ ಮಂತ್ರಿಗಳೂ ಇದ್ದಾರೆ. ದಯವಿಟ್ಟು ಸಕ್ಕರೆ ಮಂತ್ರಿಗಳು ಮತ್ತು ಮುಖ್ಯಮಂತ್ರಿಗಳು ಅತ್ಯಂತ ಗಂಭೀರವಾಗಿ ಪರಿಗಣಿಸಿ, ತಮ್ಮ ಸಮ್ಮುಖದಲ್ಲಿ ಒಂದು ಪ್ರಾಮಾಣಿಕವಾದ ಉತ್ತರವನ್ನು ಕೊಡುವುದರ ಮೂಲಕ ರೈತರ ಸಮಸ್ಯೆಯನ್ನು ಬಗೆಹರಿಸಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

+ಶ್ರೀ ಉಮೇಶ್ ವಿ. ಕತ್ತಿ (ಸಕ್ಕರೆ ಸಚಿವರು) :ಮಾನ್ಯ ಸಭಾಧ್ಯಕ್ಷರೇ, ಮಾನ್ಯ ಪುಟ್ಟಣ್ಣಯ್ಯನವರು ಹೇಳಿದಹಾಗೆ ಮಹದೇಶ್ವರ ಸಕ್ಕರೆ ಕಾರ್ಖಾನೆ ಬಾಕಿ ಹಣದ ಬಗ್ಗೆ ನಾನೂ ಸಹ ಒಪ್ಪುತ್ತೇನೆ. ಅವರು ಹೇಳಿದರೀತಿ ಒಟ್ಟು 11 ಕೋಟಿ ಬರಬೇಕಾದ ಬಾಕಿಯಲ್ಲಿ, ಒಂದು ವರ್ಷದಲ್ಲಿ ರೈತರಿಗೆ ಕೊಡುತ್ತಿರತಕ್ಕ ಬಾಕಿಯ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಒಂದು ಸಭೆ ಮಾಡಿ, ಸುಮಾರು 8 ಕೋಟಿ ರೂಪಾಯಿಗಳ ಬಾಕಿ ಹಣವನ್ನು ಕೊಡಮಾಡಲಾಗಿದೆ. ಇನ್ನುಳಿದಂಥ 3 ಕೋಟಿ 76 ಲಕ್ಷ ರೂಪಾಯಿಗಳ ಬಾಕಿ ಹಣದ ಮೇಲೂ ಸಹ ಸಾಕಷ್ಟು ಸಲ ನಾಮ ಅವರನ್ನು ಕರೆಯಿಸಿ, 2-3 ಸಭೆ ಮಾಡಿದ್ದೇನೆ. ಅವರು ಕೊಡುತ್ತೇವೆಂದು ಆಶ್ವಾಸನೆ ಕೊಡುವುದು ಮತ್ತೆ ತಪ್ಪಿಸುವುದು ಈ ರೀತಿ ಹೇಳಿಕೊಂಡೇ ಬಂದಿದ್ದಾರೆ. ಹೋದವಾರ ಅವರಜೊತೆ ಮಾತನಾಡಿದಾಗ, ಅವರು ಬರೆದುಕೊಟ್ಟ ಕಾಗದ ಕೂಡ ಇದೆ. ಅದನ್ನು ಸದನದ ಗಮನಕ್ಕೂ ತರುತ್ತೇನೆ. ಒಟ್ಟು 11 ಕೋಟಿಯಲ್ಲಿ ಈಗಾಗಲೇ 8 ಕೋಟಿಯಷ್ಟು ಹಣವನ್ನು ಕೊಟ್ಟಿದ್ದೇವೆ. ಇನ್ನು 3 ಕೋಟಿ 76 ಲಕ್ಷ ರೂಪಾಯಿಗಳ ಬಾಕಿಯನ್ನು ಕೊಡಬೇಕು. ಒಂದು ಕೋಟಿ 7 ಲಕ್ಷ ರೂಪಾಯಿಗಳ ಬಗ್ಗೆ ಈಗಾಗಲೇ ಕೊಟ್ಟಂಥ ಚೆಕ್ಕುಗಳು ಬೌನ್ಸ್ ಆಗಿವೆಯೆಂದು ಮಾನ್ಯಸದಸ್ಯರು ಹೇಳುತ್ತಿದ್ದಾರೆ. ಈ ರೀತಿ ಚೆಕ್ ಬೌನ್ಸ್ ಆದ ಬಗ್ಗೆ ಕ್ರಿಮಿನಲ್ ಕೇಸ್ ಹಾಕುವುದಕ್ಕೆ ಸಾಧ್ಯವಾಗುತ್ತದೆ. ನಾವೂ ಸಹ ಈಗಾಗಲೇ ಆ ಕಾರ್ಖಾನೆಯ ಸಾಮಗ್ರಿಗಳನ್ನು ಸೀಜ್ ಮಾಡುವುದಕ್ಕೆ ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಗೆ ಆದೇಶ ಕೊಟ್ಟಿದ್ದೇವೆ. ಅವರು ಸೀಜ್ ಕೂಡ ಮಾಡಿದ್ದಾರೆ. ಆದರೆ, ಅಲ್ಲಿ ಅಷ್ಟೊಂದು ಸಕ್ಕರೆ ಉಳಿದಿಲ್ಲ. ಅದರ ಜೊತೆಗೆ, ಶಿವಮೊಗ್ಗ ಜಿಲ್ಲಾಧಿಕಾರಿಗಳು ಈಗಾಗಲೇ ಸಂಬಂಧಪಟ್ಟ ಕಾರ್ಖಾನೆಯ ವ್ಯವಸ್ಥಾಪಕ ನಿರ್ದೇಶಕರ ಮೇಲೆ ಕೋರ್ಟ್ ಮುಖಾಂತರ ಚೀಟಿಂಗ್ ಕೇಸನಲ್ಲಿ ಈಗಾಗಲೇ ಕ್ರಿಮಿನಲ್ ಕೇಸ್ ಕೂಡ ಹಾಕಿದ್ದಾರೆ. ಅದರ

ಜೊತೆಗೆ, ನಮಗೆ ಟೇಕ್ ಓವರ್ ಮಾಡುವುದಕ್ಕೆ ಅಧಿಕಾರ ಇಲ್ಲದ ಕಾರಣ, ನಾವು ಕೇಂದ್ರಸರ್ಕಾರಕ್ಕೆ ಬರೆದಿದ್ದೇವೆ. ಸುಮಾರು 6 ತಿಂಗಳ ಹಿಂದೆ ಕೇಂದ್ರಸರ್ಕಾರಕ್ಕೆ ಬರೆದಿದ್ದೇವೆ. ಅದರ ಮೇಲೆ 2-3 ಸಲ ಒತ್ತಾಯ ಮಾಡಿರುತ್ತೇವೆ. ಅವರು ಪರ್ಮಿಷನ್ ಕೊಟ್ಟರೆ, ಮೂರು ವರ್ಷಗಳ ಕಾಲ ನಾವು ಟೇಕ್ ಓವರ್ ಮಾಡತಕ್ಕ ಅಧಿಕಾರ ಇದೆ. ಅದರ ಜೊತೆಗೆ, ಮೊನ್ನೆ ಮೊನ್ನೆ ತಮಿಳುನಾಡು ರಾಜ್ಯ ಸಕ್ಕರೆ ಕಾರ್ಖಾನೆಗಳನ್ನು ಟೇಕ ಓವರ ಮಾಡುವುದಕ್ಕೆ ಕೆಲವು ಕಾನೂನುಗಳನ್ನು ಹುಟ್ಟುಹಾಕಿಕೊಂಡಿದೆ. ಅದೇರೀತಿಯಾಗಿ ನಾವು ದೇವಿ ಸಕ್ಕರೆ ಕಾರ್ಖಾನೆ, ಮಹದೇಶ್ವರ ಸಕ್ಕರೆ ಕಾರ್ಖಾನೆ ಅಥವಾ ಯಾವುದೇ ಸಕ್ಕರೆ ಕಾರ್ಖಾನೆಯನ್ನು ರಾಜ್ಯಸರ್ಕಾರವೇ ಟೇಕೆ ಓವರ ಮಾಡಿ, ಅವುಗಳನ್ನು ಚೆನ್ನಾಗಿ ನಡೆಸುವ ಉದ್ದೇಶವಿಟ್ಟುಕೊಂಡು, ಹೊಸ ಕಾಯಿದೆಗಳನ್ನು ರೂಪಿಸಬೇಕಾಗುತ್ತದೆ. ಈ ಕಾಯಿದೆಗಳನ್ನು ರೂಪಿಸಲು ಪ್ರಯತ್ನ ಮಾಡುತ್ತೇವೆ. ಮಹದೇಶ್ವರ ಸಕ್ಕರೆ ಕಾರ್ಖಾನೆ ಬಗ್ಗೆ ಅದರ ಜೊತೆಗೆ ಬೇರೆ ಕಾರ್ಖಾನೆಗಳ ಬಗ್ಗೆಯೂ ಇಲ್ಲಿ ಮಾನ್ಯ ಪುಟ್ಟಣ್ಣಯ್ಯನವರು ಹೇಳಿದಂತೆ, 1994-95ರಲ್ಲಿ ಬೀದರ್ ಮತ್ತು ಅಳಂದ ಸಕ್ಕರೆ ಕಾರ್ಖಾನೆ ಈ ಎರಡರ ಬಗ್ಗೆ ಮಾತ್ರ ಬಾಕಿ ಉಳಿದಿದೆ. ಕಾರಣವೇನೆಂದರೆ, ಅಲ್ಲಿಯ ಕಾರ್ಖಾನೆಯ ವ್ಯವಸ್ಥಾಪಕ ನಿರ್ದೇಶಕರಾಗಲೀ, ಆಡಳಿತ ಮಂಡಳಿಯವರಾಗಲೀ ಆಗಿನ ಸಕ್ಕರೆಗೆ ನಿಗದಿಪಡಿಸಿರುವ ಎಸ್.ಎ.ಪಿ.ಬೆಲೆಗಿಂತ 200 ರೂಪಾಯಿ ಹೆಚ್ಚಿಗೆ ಕೊಟ್ಟ ಕಾರಣ ಬಾಕಿಯಾಗಿ ಉಳಿದಿದೆ. ಇನ್ನುಳಿದ ರಾಜ್ಯದ ಯಾವುದೇ ಕಾರ್ಖಾನೆಯಲ್ಲಿ ಆ ವರ್ಷದಲ್ಲಿ ಬಾಕಿ ಉಳಿದಿಲ್ಲ. 1994-95ರಲ್ಲಿ ಯಾವುದೇ ಕಾರ್ಖಾನೆಯವರು ಬಾಕಿಯನ್ನು ಉಳಿಸಿಕೊಂಡಿಲ್ಲ. ಇವೆರಡು ಕಾರ್ಖಾನೆಗಳ ಬಗ್ಗೆ ಉಳಿಸಿಕೊಂಡಿರುವ ಬಾಕಿಯ ವಿಚಾರದಲ್ಲಿ ಸರ್ಕಾರವೂ ಸಹ 6 ಕೋಟಿ ರೂಪಾಯಿಗಳನ್ನು ಕೊಟ್ಟು ಸಾಧ್ಯವಾದಷ್ಟು ರೈತರ ಹೊರೆಯನ್ನು ಕಡಿಮೆ ಮಾಡುವುದಕ್ಕೆ ಪ್ರಯತ್ನ ಮಾಡಿದೆ. ಇನ್ನುಳಿದಂಥ ಹಣವನ್ನು ಈಗಾಗಲೇ ಸಂಬಂಧಪಟ್ಟ ಕಾರ್ಖಾನೆಗಳಿಗೆ ಆದೇಶ ಕೊಟ್ಟು ಯಾವರೀತಿ ಬಗೆಹರಿಸಬೇಕೆಂಬುದು ಚರ್ಚೆಯ ಹಂತದಲ್ಲಿದೆ. ಆದಷ್ಟುಬೇಗನೆ ರೈತರಿಗೆ ಬಾಕಿ ಕೊಡತಕ್ಕ ಆಶ್ವಾಸನೆಯನ್ನು ಈ ಮುಖೇನ ಕೊಡುತ್ತೇನೆ. ಅದರ ಜೊತೆಗೆ 1995-96ರಲ್ಲಿ ಸಾಧಾರಣವಾಗಿ ರಾಜ್ಯದಲ್ಲಿ ಬರುವಂಥ ಎಲ್ಲಾ ಸಕ್ಕರೆ ಕಾರ್ಖಾನೆಯಗಳಿಂದ ಸುಮಾರು 12 ಕೋಟಿ 45 ಲಕ್ಷ ರೂಪಾಯಿಗಳ ಬಾಕಿ ಉಳಿದಿದೆ. ತಮಗೆ ಗೊತ್ತಿದ್ದಹಾಗೆ, 1994-95ರಲ್ಲಿ ಈ ದೇಶದಲ್ಲಿ ಸಾಕಷ್ಟು ಕಬ್ಬು ಬೆಳೆದು ರೈತರಿಗೆ ತೊಂದರೆಯಾಗಿದೆ, ಕಾರ್ಖಾನೆಗಳಿಗೆ ತೊಂದರೆಯಾಗಿದೆ. ನಮ್ಮ ರಾಜ್ಯದ ಕಾರ್ಖಾನೆಗಳಲ್ಲಿ ಅಷ್ಟೇ ಅಲ್ಲ, ಬೇರೆ ರಾಜ್ಯದ ಕಾರ್ಖಾನೆಗಳವರೂ ಸಹ ಸಾಕಷ್ಟು ತೊಂದರೆಗಳನ್ನು ಅನುಭವಿಸಿದ್ದಾರೆ. ನಮ್ಮಲ್ಲಿ ಅಷ್ಟೇ ಅಲ್ಲ, ದೇಶದಲ್ಲಿಯೇ ಬಾಕಿ ಉಳಿದಿದೆ. ಆದರೂ ಕೂಡ ನಾವು ಪ್ರಯತ್ನ ಮಾಡಿ, ಬಾಕಿಯನ್ನು ಕೊಡಿಸುವುದಕ್ಕೆ ವ್ಯವಸ್ಥೆ ಮಾಡುತ್ತೇವೆ. ಹೋದವರ್ಷ ಸಕ್ಕರೆ ಉತ್ಪಾದನೆಯಾದರೂ ಸಹ ಹಣಕಾಸಿನ ಮೂಲಗಳು ಎಂದರೆ, ಸಕ್ಕರೆ ಮೇಲೆ ಬರಬೇಕಾದ ಸಾಲಬರದ ಕಾರಣ, ಈ ಬಾಕಿಉಳಿದುಕೊಂಡು ಬಂದಿದೆ. ಹೋದ ವರ್ಷದಿಂದ ಉತ್ಪಾದನೆಯಾದ ಸಕ್ಕರೆ, ಇದುವರೆಗೆ 100 ಕೋಟಿ ಆಗುವಷ್ಟು ಗೋಡೌನನಲ್ಲಿ ಇರತ್ಕಕ ಕಾರಣ, ಇದನ್ನು ಯಾವುದೇ ಪರಿಸ್ಥಿತಿಯಲ್ಲಿ ಉಳಿಯುವುದಕ್ಕೆ ಬಿಡುವುದಿಲ್ಲ. ವಾಸ್ತವಸ್ಥಿತಿ ತಮ್ಮ ಗಮನಕ್ಕೆ ಬಂದಿರುವ ಪ್ರಕಾರ ರಾಷ್ಟ್ರದಲ್ಲಿಯೇ ಸಾಕಷ್ಟು ತೊಂದರೆಯಾಗಿದೆ. ಆ ಕಾರಣ ಬಾಕಿ ಉಳಿದಿದೆ. ಬರುವ ಎರಡು ತಿಂಗಳಲ್ಲಿ

1995-96ರ ಉಳಿದಂಥ ಬಾಕಿಯನ್ನು ಕೊಡಿಸತಕ್ಕ ವ್ಯವಸ್ಥೆ ಮಾಡುತ್ತೇವೆಂದು ತಮಗೆ ತಿಳಿಸುತ್ತೇನೆ. ಈ ಹಂಗಾಮಿನಲ್ಲಿ 114ಕೋಟಿರೂ.ಗಳಷ್ಟು ಬಾಕಿಯಾಗಿದೆ. ಇದು 1996-97ನೇ ಸಾಲಿನದು. ಈ ಬಾಕಿಯು ಚಾಲ್ತಿ ಹಂಗಾಮಿನಲ್ಲಿ ಬರುವುದರಿಂದ, ಪ್ರತಿ 15 ದಿವಸಕ್ಕೆ ಬಿಲ್ ಕೊಡತಕ್ಕ ವ್ಯವಸ್ಥೆ ಇರುವುದರಿಂದ ಬಾಕಿ ಉಳಿದುಕೊಂಡಿದೆ. ಮಾನ್ಯ ಪುಟ್ಟಣಯ್ಯನವರು ಹೇಳಿದಾಗೆ ಚಾಮುಂಡೇಶ್ವರಿ ಸಕ್ಕರೆ ಕಾರ್ಖಾನೆಯದು ಸ್ವಲ್ಪ ಜಾಸ್ತಿ ಬಾಕಿ ಉಳಿದಿದೆ. ನಾನು ಅಲ್ಲಿಯ ರೈತರನ್ನೂ ಭೇಟಿಯಾಗಿ ಹೇಳಿದ್ದೇನೆ ಮತ್ತು ಅದನ್ನು ಗಮನಕ್ಕೆ ತಂದಿದ್ದೇನೆ. ಆದರೆ, ವ್ಯವಸ್ಥಾಪಕ ನಿರ್ದೇಶಕರಿಗೆ ಈಗಾಗಲೇ ಆದೇಶ ಕೊಟ್ಟಿದ್ದೇವೆ. ಈಗಾಗಲೇ ಅವರು ಹೋದ ವರ್ಷದ ದುಡ್ಡನ್ನು ಕೊಡಬೇಕೆಂದು ಹೇಳಿದ್ದೇವೆ. ರೈತರೂ ಮತ್ತು ಆದರೂ ಹೊಂದಾಣಿಕೆ ಮಾಡಿಕೊಂಡು ಹೋದವರ್ಷದ ದುಡ್ಡನ್ನು ಮೊದಲು ಕೊಟ್ಟು ನಂತರ ಈ ವರ್ಷದ್ದು, ಮಾರ್ಚಿ 15ರೊಳಗೆ ಕೊಡುವಂತೆ ರೈತರು ಹಾಗೂ ಆ ಕಾರ್ಖಾನೆಯ ವ್ಯವಸ್ಥಾಪಕ ನಿರ್ದೇಶಕರು ಹೊಂದಾಣಿಕೆ ಮಾಡಿಕೊಂಡಿದ್ದಾರೆ. ಆ ಪ್ರಕಾರ ಕೊಡುತ್ತೇವೆಂದು ತಿಳಿಸಲು ಇಚ್ಛಿಪಡುತ್ತೇನೆ. ಈ ವರ್ಷ ಯಾವುದೇ ರೀತಿಯ ಬಾಕಿ ಉಳಿಯುವುದಿಲ್ಲವೆಂದು ತಮಗೆ ಹೇಳುತ್ತೇನೆ. ಇದರ ಜೊತೆಗೆ, ಸಕ್ಕರೆ ಎಸ್.ಎ.ಪಿ. ಬಗ್ಗೆ ಮಾನ್ಯ ಪುಟ್ಟಣ್ಣಯ್ಯನವರು ಹೇಳಿದಹಾಗೆ, ಈಗಾಗಲೇ ಹಿಂದೆ ನವೆಂಬರ್‌ನಲ್ಲಾಗಲೀ ಅಥವಾ ಅಕ್ಟೋಬರ್‌ನಲ್ಲಾಗಲೀ ಮುಖ್ಯ ಮಂತ್ರಿಗಳ ಅಧ್ಯಕ್ಷತೆಯಲ್ಲಿ ಸಾಕಷ್ಟು ಸಭೆಗಳಾಗಿವೆ. ಆದರೆ, ಏನು ಮಾಡಬೇಕೆಂದು ತೀರ್ಮಾನಕ್ಕೆ ಬರುವುದಕ್ಕಾಗಿಲ್ಲ. ಕಾರಣವೇನೆಂದರೆ, ಕೇಂದ್ರಸರ್ಕಾರ ಎಸ್.ಎಂ.ಪಿ. ರೇಟ್ ನಿಗದಿ ಮಾಡದ ಕಾರಣ, ನಾವು ಎಸ್.ಎ.ಪಿ. ಮಾಡುವುದಕ್ಕಾಗಿಲ್ಲ. ಈಗಾಗಲೇ ಅವರು ಹೇಳಿದಂತೆ, ಮುಂಗಡ ಹಣವಾಗಿ 600 ರೂಪಾಯಿ ಕೊಡುವಂಥ ವ್ಯವಸ್ಥೆ ಮಾಡಿದ್ದೇವೆ. ಆ ರೀತಿ ಎಲ್ಲಾ ಕಾರ್ಖಾನೆಯಗಳವರೂ ಮುಂಗಡ ಹಣವಾಗಿ 600 ರೂಪಾಯಿಗಳನ್ನು ಕೊಡುತ್ತಿದ್ದಾರೆ. ಈ ಸದನ ಮೂಲಕ ತಕ್ಷಣ ಎಸ್.ಎ.ಪಿ. ಬಗ್ಗೆ ಒಂದು ತೀರ್ಮಾನ ಮಾಡಿ ಆದೇಶವನ್ನು ಹೊರಡಿಸುತ್ತೇವೆ.ಇಷ್ಟು ಉತ್ತರವನ್ನು ತಮ್ಮಮುಖಾಂತರ ಮಾನ್ಯಸದಸ್ಯರಿಗೆ ಒದಗಿಸಲು ಇಚ್ಛಿಪಡುತ್ತೇನೆ.

ಶ್ರೀ ಕೆ.ಎಸ್. ಈಶ್ವರಪ್ಪ : ಸಕ್ಕರೆ ಕಾರ್ಖಾನೆ ಮಾಲೀಕ, ರೈತರಿಗೆ ಹಾಗೂ ಕಾರ್ಮಿಕರಿಗೆ ಬಾಕಿ ಕೊಡಬೇಕೆಂದು ಹೇಳಿ ಚೀಟ್ ಮಾಡಿದ್ದಾನೆ. ಅವರ ಮೇಲೆ ಕೇಸ್ ಹಾಕಿದ್ದಾರೆ, ವಾರೆಂಟ್ ಕೂಡ ಇಷ್ಟೂ ಆಗಿದೆ. ಆದರೆ, ಅವರು ಇಲ್ಲಿ, ಬೆಂಗಳೂರಿನಲ್ಲಿ ಪಂಚತಾರಾ ಹೋಟೆಲಿನಲ್ಲಿ ಪ್ರೆಸ್ ಮೀಟ್ ಮಾಡುತ್ತಾನೆ. ಅವರನ್ನು ಅರೆಸ್ಟ ಮಾಡುವುದಕ್ಕಾಗುತ್ತಾ ಇಲ್ಲ. ಅವರನ್ನು ಏಕೆ ಅರೆಸ್ಟ್ ಮಾಡುತ್ತಾ ಇಲ್ಲವೆಂದು ದಯವಿಟ್ಟು ತಿಳಿಸಿದರೆ ರೈತರು ಮತ್ತು ಕಾರ್ಮಿಕರು ತೃಪ್ತಿಯಾಗುತ್ತಾರೆ.

ಅಧ್ಯಕ್ಷರು : ಅರೆಸ್ಟ್ ಏಕೆ ಮಾಡಲಿಲ್ಲವೆಂದು ಹೇಳಿದರೆ, ಎಲ್ಲಾ ಚೀಟಿಂಗ್ ಕೇಸ್ ಶಿವಮೊಗ್ಗದಲ್ಲೇ ಇದೆ.

ಶ್ರೀ ಕೆ.ಎಸ್.ಈಶ್ವರಪ್ಪ : ಶಿವಮೊಗ್ಗದಲ್ಲಿ ಎಲ್ಲೂ ಇಲ್ಲ. ಅಲ್ಲೊಂದು, ಇಲ್ಲೊಂದು ಇದೆ.

ಅಧ್ಯಕ್ಷರು : ದಿವಸ ಒಂದೊಂದೇ ಹೇಳುತ್ತೀರಿ.

ಶ್ರೀ ಕೆ.ಎಸ್. ಈಶ್ವರಪ್ಪ : ವಾರೆಂಟ್ ಇಷ್ಯೂ ಆಗಿದೆ. ಬೆಂಗಳೂರಿನಲ್ಲಿ ಪಂಚತಾರಾ ಹೋಟೆಲಿನಲ್ಲಿ ಪ್ರೆಸ್ ಮೀಟ್ ಮಾಡುತ್ತಾರೆ. ಇಂತಹ ವ್ಯಕ್ತಿಯನ್ನು ಅರೆಸ್ಟ ಮಾಡುವುದಕ್ಕೆ ಅವರ ಕೈಯಲ್ಲಿ ಆಗುತ್ತಾ ಇಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಈ ರಾಜ್ಯದ ಮುಖ್ಯಸ್ಥರೇ ಶಿವಮೊಗ್ಗದಿಂದ ಬರುತ್ತಿದ್ದಾರೆ.

ಶ್ರೀ ಕೆ.ಎಸ್. ಈಶ್ವರಪ್ಪ : ದಯವಿಟ್ಟು ಅವರನ್ನು ಅರೆಸ್ಟ ಮಾಡುವುದಕ್ಕೆ ಏನಾದರೂ ಕ್ರಮ ತೆಗೆದುಕೊಂಡು ಕಾರ್ಮಿಕರನ್ನು ಬದುಕಿಸುತ್ತೀರೋ ಎಂದು ಕೇಳುತ್ತೇನೆ.

ಅಧ್ಯಕ್ಷರು : ನಾವು ಕೋಲಾರದವರು ಎಂಬ ಹೆಮ್ಮೆ ನಮಗಿದೆ.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ : ಕೋಲಾರದವರು ಎಂಬ ಹೆಮ್ಮೆ ಏಕೆ ಎಂದು ಕೇಳುತ್ತಿದ್ದಾರೆ. ಅಲ್ಲಿ ವಾರಂಟ್ ಇಷ್ಯೂ ಮಾಡಿಸಿಕೊಳ್ಳುವವರೂ ಇಲ್ಲ, ಅರೆಸ್ಟ್ ಮಾಡುವವರೂ ಇಲ್ಲ ಎಂದು ಹೇಳುತ್ತಿದ್ದಾರೆ.

ಅಧ್ಯಕ್ಷರು : ಕೋಲಾರದವರು ಅರೆಸ್ಟ್, ವಾರಂಟ್ ಇಂಥಾದ್ದನ್ನು ಮಾಡುವುದಿಲ್ಲ.

ಶ್ರೀ ಕೆ.ಎಸ್. ಈಶ್ವರಪ್ಪ : ನಾವು ಕೂಗುತ್ತೇವೆ, ಚೀರುತ್ತೇವೆ ನಂತರ ಸುಮ್ಮನಾಗುತ್ತೇವೆ ಎನೂ ಮಾಡತಕ್ಕ ಸ್ಥಿತಿಯಲ್ಲಿ ನಾವಿಲ್ಲ. ಏಕೆಂದರೆ, ಅವರು ಅರೆಸ್ಟ್ ಮಾಡುವುದಿಲ್ಲ, ವಾರಂಟ್ ಇಷ್ಯೂ ಮಾಡಿ ಸುಮ್ಮನೆ ಕುಳಿತಿದ್ದಾರೆ.

ಅಧ್ಯಕ್ಷರು : ಚೀಟಿಂಗ್ ಎಂದರೆ ನಿಮಗೇನೆಂದು ಗೊತ್ತೇ? It is an insult to intelligence. How you can be cheated? Unless one is more intelligent than you, you can't cheat him.

ಅಧ್ಯಕ್ಷರು : ನಿಮ್ಮಲ್ಲಿ ಜಾಣರು ಇದ್ದಾರೆ.

ಶ್ರೀ ಕೆ.ಎಸ್. ಈಶ್ವರಪ್ಪ : ಜಾಣರು ಇದ್ದಾರೆ ಆದ್ದರಿಂದಲೇ ವಾರೆಂಟ್ ಇಶ್ಯೂ ಆಗಿದ್ದರು. ಅರೆಸ್ಟ ಮಾಡಿಲ್ಲ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ಮಾನ್ಯ ಅಧ್ಯಕ್ಷರೇ ತಾವು ಹೇಳಿದಂತ ಕಬ್ಬು ಬೆಳೆಗಾರರು ಜಾಣರಲ್ಲ. ಮಾಜಿ ಮುಖ್ಯಮಂತ್ರಿಗಳು ಟ್ರಾನ್ಸಪೋರ್ಟಶನ್ ಸಬ್ಸೀಡಿ ಕೊಟ್ಟಿದ್ದರು. ಟ್ರಾನ್ಸಪೋರ್ಟೇಶನಸ್ ಸಬ್ಸೀಡಿ ಸುಮಾರು ನಾಲ್ಕುವರೆ ಕೋಟಿ ರೂಪಾಯಿಗಳು ಬರಬೇಕು. ಅದರ ಬಗ್ಗೆ ತಾವು ಹೇಳಿ ಈಗ ತಾವು ಮೀಟಿಂಗ್ ಕರೆದು ಆಯಾಯಾ ಪ್ರದೇಶಗಳಲ್ಲಿ ಬರುವ ಸಕ್ಕರೆ ಕಾರ್ಖಾನೆಗಳ ವ್ಯಾಪ್ತಿಯಲ್ಲಿ ಬರುವ ಶಾಸಕರನ್ನು ಆ ಸಭೆಗೆ ಕರೆದು ಮೀಟಿಂಗ್ ಮಾಡಿ. ತಾವು ಏನು ಹೇಳಿದಿರಿ 600 ರೂಪಾಯಿಗಳು ಕೊಡಬೇಕೆಂದು ಹೇಳಿದಿರಿ. 600 ರೂಪಾಯಿ ಬೆಂಬಲ ಬೆಲೆ ಘೋಷಣೆ ಮಾಡಿದಿರಿ. ಆದಾದ ಮೇಲೆ ಯಾವುದೇ ಹೈ ಪವರ ಮೀಟಿಂಗ್ ಆಗಲಿಲ್ಲ. ಆದ್ದರಿಂದ ತಾವು ಕಬ್ಬು ಬೆಳೆಗಾರರ ಹಿತದೃಷ್ಟಿಯನ್ನು ತಾವು ಆಲೋಚನೆ ಮಾಡಲಿಲ್ಲ. ದಯಮಾಡಿ ಸಂಬಂಧಪಟ್ಟ ಎಲ್ಲಾ

ಕಾರ್ಖಾನೆಗಳವರನ್ನು ಕರೆದು ಮೀಟಿಂಗ್ ಮಾಡಿ ಬೆಲೆ ನಿಗಧಿಮಾಡುವಂತಹ ಒಂದು ಕೆಲಸ ಮಾಡಬೇಕು. ಈಗಾಗಲೇ ತಾವು ಒಂದು ಕೆ.ಜಿ. ಸಕ್ಕರೆ ಬೆಲೆ 10-50 ಪೈಸೆ ಎಂದು ಮಾಡಿದ್ದೀರಿ. ಎರಡು ಸಾರಿ ಲೆವಿ ಸಕ್ಕರೆ ಬೆಲೆ ಜಾಸ್ತಿ ಆಯಿತು. ಆದ್ದರಿಂದ ತಾವು ನಾಲ್ಕೂವರೆ ಕೋಟಿ ರೂಪಾಯಿಗಳು ಬಾಕಿಕೊಡಿಸುವ ಬಗ್ಗೆ ಮತ್ತು ಮೀಟಿಂಗ ಕರೆಯುವ ಬಗ್ಗೆ ದಯವಿಟ್ಟು ಹೇಳಬೇಕು.

(ಮಾನ್ಯ ಉಪಾಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೇ ಇದರ ಜೊತೆಯಲ್ಲಿಯೇ ಮಾನ್ಯ ಮಂತ್ರಿಗಳ ಗಮನಕ್ಕೆ ತರತಕ್ಕಂಥಾದ್ದು ಏನೆಂದರೆ ಮಾನ್ಯ ಸದಸ್ಯರಾದ ಪುಟ್ಟಣ್ಣಯ್ಯನವರು ಕೇಳಿದ ಪ್ರಶ್ನೆಯ ಜೊತೆಯಲ್ಲಿ ಬೀದರ್ ಹಳ್ಳಿಭೇಡ್ ಶುಗರ್ ಫ್ಯಾಕ್ಟರಿದು ತಮಗೆ ಗೊತ್ತಿದೆ. ಅದರ ಬಗ್ಗೆ ಸಿ.ಓ.ಡಿ. ವಿಚಾರಣೆ ಆಗಿ ಸರ್ಕಾರಕ್ಕೆ ಈಗಾಗಲೇ ವರದಿಯನ್ನು ಒಪ್ಪಿಸಿದ್ದಾರೆ. ಅದರ ಮೇಲೆ ಸರ್ಕಾರ ತಕ್ಷಣ ಕ್ರಮ ಜರುಗಿಸಿಲ್ಲ. ರೈತರಿಗೆ ಕೊಡಬೇಕಾಗಿರತಕ್ಕಂಥ ಬಾಕಿ ಹಣವನ್ನು ಸಹ ಇದುವರೆಗೂ ಕೊಟ್ಟಿಲ್ಲ. ಜೊತೆಗೆ ಅಳಂದ್ ಶುಗರಕೋ ಅಪರೇಟಿವ್ ಫ್ಯಾಕ್ಟರಿ ಗುಲ್ಬರ್ಗಾ ಜಿಲ್ಲೆಯಲ್ಲಿರತಕ್ಕಂಥಾದ್ದು, ಬಾಕಿ ಹಣ ಕೊಡತಕ್ಕಂಥಾದ್ದು ಪೆಂಡಿಂಗ್ ಇದೆ. ತಮ್ಮ ಸರ್ಕಾರದಿಂದ ಅಥವಾ ಅಪೆಕ್ಸ ಬ್ಯಾಂಕನ ನಾಲ್ಕು ಕೋಟಿ ರೂಪಾಯಿಗಳನ್ನು ಲೋನ ತೆಗೆದುಕೊಂಡು ಶುಗರ್ ಫ್ಯಾಕ್ಟರಿಗಳಿಗೆ ಕೊಡತಕ್ಕಂಥ ಒಂದು ವ್ಯವಸ್ಥೆಯನ್ನು ಮೂರು ತಿಂಗಳ ಹಿಂದೆ ಮಾಡಿದರು. ಇನ್ನೂ ಸುಮಾರು 3-4 ಕೋಟಿ ರೂಪಾಯಿಗಳು ಬಾಕಿ ಉಳಿದಿದೆ. ಅಲ್ಲಿಯೂ ಸಹ ಸಿ.ಓ.ಡಿ. ವಿಚಾರಣೆಯನ್ನು ಮಾಡಿಸಿ ಯಾರು ತಪ್ಪಿತಸ್ಥರು ಇದ್ದಾರೆ, ಅವರ ಮೇಲೆ ಕ್ರಮ ಜರುಗಿಸಬೇಕೆಂದು ನಾವು ಸದನದಲ್ಲಿ ಸವಿಸ್ತಾರವಾಗಿ ಪ್ರಸ್ತಾಪ ಮಾಡಿದ್ದೇವೆ. ಅದರೂ ಸಹ ಒಂದು ಕಡೆ ಸಿ.ಓ.ಡಿ. ವಿಚಾರಣೆ ಆಗಿ ಅದರ ವರದಿ ಸರ್ಕಾರಕ್ಕೆ ಬಂದರೂ ಸಹ ಅದರ ಮೇಲೆ ಯಾವುದೇ ಕ್ರಮ ಇಲ್ಲ. ಇನ್ನೊಂದು ಕಡೆ ಇವತ್ತಿಗೂ ಕೂಡ ಅಳಂದ್ ಶುಗರ್ ಫ್ಯಾಕ್ಟರಿಯಲ್ಲಿ ಏನು ಲೋಪದೋಷಗಳು ಇವೆ, ಅದರ ಬಗ್ಗೆ ಕೂಡಕ್ರಮ ಜರುಗಿಸಿಲ್ಲ. ಇದರ ಜೊತೆಯಲ್ಲಿಯೇ ಈ ವಿಷಯಗಳಿಗೂ ಸಹ ಸ್ವಲ್ಪ ಸಮಗ್ರವಾಗಿ ಉತ್ತರ ಹೇಳಿದರೆ, ನಾವು ಪ್ರತಿಯೊಂದು ಶುಗರ್ ಫ್ಯಾಕ್ಟರಿಗಳಿಗೂ ಬೇರೆ ಬೇರೆ ಪ್ರಶ್ನೆಯನ್ನು ಕೇಳುದಕ್ಕಿಂತಲೂ ಎಲೆಲ್ಲಿ ಯಾವ ಯಾವ ಶುಗರ್ ಫ್ಯಾಕ್ಟರಿಗಳಲ್ಲಿ ಬಾಕಿ ಇದೆ, ಅವುಗಳಿಗೆ ಹಣ ಒದಗಿಸುವ ಬಗ್ಗೆ ತಾವು ಯಾವ ಯಾವ ಕ್ರಮ ಕೈಗೊಳ್ಳುತ್ತೀರಿ? ಸಿ.ಓ.ಡಿ. ವರದಿ ನಿಮ್ಮ ಕೈಯಲ್ಲಿ ಇವೆ. ಅದರ ಬಗ್ಗೆ ತಾವು ಏನು ಕ್ರಮವನ್ನು ಜರುಗಿಸುತ್ತೀರಿ ಎನ್ನತಕ್ಕಂಥಾದ್ದನ್ನು ಮಾನ್ಯ ಮಂತ್ರಿಗಳು ಹೇಳಬೇಕು.

ಶ್ರೀ ಉಮೇಶ್ ವಿ. ಕಟ್ಟಿ (ಸಕ್ಕರೆ ರಾಜ್ಯ ಸಚಿವರು) : ಮಾನ್ಯ ಅಧ್ಯಕ್ಷರೇ ಮಾನ್ಯ ವಿರೋಧಪಕ್ಷದ ನಾಯಕರು ಹೇಳಿದಂತೆ ಅಳಂದ್ ಮತ್ತು ಬೀದರ್ ಸಕ್ಕರೆ ಕಾರ್ಖಾನೆಗಳ ಬಗ್ಗೆ ಹೇಳುವುದಾದರೆ ಬಾಕಿ ಇದ್ದಿದ್ದು ಎರಡೂ ಶುಗರ್ ಫ್ಯಾಕ್ಟರಿಗಳು ಕೂಡಿ 21 ಕೋಟಿ ರೂಪಾಯಿಗಳು. ಅದರಲ್ಲಿ ಫ್ಯಾಕ್ಟರಿಗಳಿಗೆ 6 ಕೋಟಿ ರೂಪಾಯಿಗಳನ್ನು ಒದಗಿಸಿದೆ. ರೈತರಿಗೆ ಆ ಹಣವನ್ನು ಕೊಡುವಂತಹ ವ್ಯವಸ್ಥೆಯನ್ನು ಮಾಡಿದೆ. ಎರಡೂ ಸಕ್ಕರೆ ಕಾರ್ಖಾನೆಗಳಲ್ಲಿಯೂ ಸಹ ಸುಮಾರು 15 ಕೋಟಿ ರೂಪಾಯಿಗಳಷ್ಟು ಹಣ ಬಾಕಿ ಉಳಿದಿದೆ. ಆಯಾಯಾ ವರ್ಷದಲ್ಲಿ ಎಸ್.ಎ.ಪಿ. ಅಂದರೆ ಈಗ ಮಾನ್ಯ ಪುಟ್ಟಣ್ಣಯ್ಯನವರು

ಹೇಳಿದ ಹಾಗೆ, ಹೈ ಪವರ್ ಕಮಿಟಿಯವರು ಏನು ಸಕ್ಕರೆ ಬೆಲೆಯನ್ನು ನಿಗಧಿ ಮಾಡುತ್ತಾರೆ ಆ ಪ್ರಕಾರವಾಗಿ ರಿಕವರಿ ಎಷ್ಟು ಎನ್ನುವ ಬಿಲ್ ಕೊಟ್ಟಿದ್ದರೆ ಬಾಕಿ ಉಳಿಯುವ ಪ್ರಶ್ನೆಯೇ ಬರುತ್ತಿರಲಿಲ್ಲ. ಆದರೆ ಈಗಿನ ಆಡಳಿತ ಮಂಡಲಿಯವರು ವ್ಯವಸ್ಥಾಪಕ ನಿರ್ದೇಶಕರು ಆಗಲಿ ತಾವು ಎಷ್ಟು ಎರಡೂ ಶುಗರ್ ಫ್ಯಾಕ್ಟರಿಯವರು ಕೊಟ್ಟು ಈಗ ಈ ಬಾಕಿ ಹಣ ಉಳಿದು ಕೊಂಡಿದೆ. ಈ ಬಾಕಿ ಹಣ ಶುಗರ್ ಫ್ಯಾಕ್ಟರಿ ಹಾನಿಯಿಂದಲ್ಲ ಅಥವಾ ಉಳಿದ ಯಾವುದೇ ಕಾರಣದಿಂದ ಆಗಿಲ್ಲ. ಈಗಾಗಲೇ ರೈತರಿ 6 ಕೋಟಿ ರೂಪಾಯಿಗಳ ಹಣ ಕೊಡುವಂತಹ ವ್ಯವಸ್ಥೆ ಮಾಡಿದ್ದೇವೆ. 1995-96 ಮತ್ತು 1996-97ರಲ್ಲಿ ಅವರು ಎಷ್ಟು ಲಾಭ ಮಾಡುತ್ತಾರೆ, ಆ ಲಾಭದಲ್ಲಿ ಸಹ ರೈತರಿಗೆ ದುಡ್ಡು ಕೊಡಿಸಬೇಕು. ಇನ್ನು ಉಳಿದಂತಹ ಹಣದಲ್ಲಿ ಏನು ಮಾಡಬೇಕು ಎನ್ನುವ ಬಗ್ಗೆ ಎರಡೂ ಸಕ್ಕರೆ ಕಾರ್ಖಾನೆಗಳವರನ್ನು ಕರೆಸಿ, ಇನ್ನು 15 ದಿವಸಗಳಲ್ಲಿ ಏನು ಮಾಡಬಹುದು ಎನ್ನುವುದನ್ನು ತಯಾರು ಮಾಡಿಕೊಂಡು ಬನ್ನಿ ಎಂದು ಹೇಳಿದ್ದೇನೆ. ಯಾವ ರೀತಿ ಆಗುತ್ತದೆಯೋ ಆ ರೀತಿ ರೈತರ ಬಾಕಿ ಕೊಡುವಂತಹ ವ್ಯವಸ್ಥೆ ಮಾಡುತ್ತೇನೆ. ಇನ್ನು ಸಿ.ಓ.ಡಿ. ತನಿಖೆ ಆಗಬೇಕಾದುದು ನಿಜ. ಈ ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆ. ಇದರಲ್ಲಿ ತಪ್ಪಿತಸ್ಥರು ಯಾರೇ ಇರಲಿ ಆಡಳಿತ ಮಂಡಲಿಯವರು ಇರಲಿ, ಅಧಿಕಾರಿಗಳು ಇರಲಿ ಅವರ ಮೇಲೆ ಸಂಪುಟದ ಸಭೆಯ ಮುಂದೆ ತಂದು ಕ್ರಮ ತೆಗೆದುಕೊಳ್ಳುತ್ತೇನೆಂದು ನಾನು ಹೇಳುತ್ತೇನೆ. ಇದರ ಜೊತೆಯಲ್ಲಿಯೇ ಮಾನ್ಯ ಸದಸ್ಯರಾದ ಪುಟ್ಟಣ್ಣಯ್ಯನವರು ಹೇಳಿದಂತೆ ಬಾಕಿ ಕೊಡಿಸುವ ಬಗ್ಗೆ ಸವಿಸ್ತಾರವಾಗಿ ಹೇಳಿದ್ದೇನೆ. ಬಾಕಿ ಕೊಡಿಸುವ ವ್ಯವಸ್ಥೆಯನ್ನು ನಾವು ಮಾಡುತ್ತೇವೆ. ನಮ್ಮ ರಾಜ್ಯದ ಸಕ್ಕರೆ ಕಾರ್ಖಾನೆಗಳಲ್ಲಿ ಮಾತ್ರ ಈ ರೀತಿ ಆಗಿಲ್ಲ. ರಾಷ್ಟ್ರದಲ್ಲಿರುವ ಎಲ್ಲಾ ಸಕ್ಕರೆ ಕಾರ್ಖಾನೆಗಳಲ್ಲಿಯೂ ಹಣ ಬಾಕಿ ಉಳಿದುಕೊಂಡಿದೆ. ರೈತರಿಗೆ ತೊಂದರೆ ಆಗಿರುವ ಬಗ್ಗೆ ಸರ್ಕಾರದ ಗಮನಕ್ಕೂ ಬಂದಿದೆ. ರೈತರಿಗೆ ಹಣ ಕೊಡಿಸುವ ವ್ಯವಸ್ಥೆಯನ್ನು ಮಾಡುತ್ತೇನೆಂದು ಹೇಳುತ್ತೇನೆ. ಬೆಲೆ ನಿಗಧಿ ಮಾಡಲು ಹೈ ಪವರ್ ಕಮಿಟಿ ಕರೆಯುತ್ತೇನೆಂದು ನಾನು ತಮ್ಮ ಮುಖೇನ ಹೇಳುತ್ತೇನೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ಮಾನ್ಯ ಅಧ್ಯಕ್ಷರೇ, ಖಾಸಗಿ ಕಾರ್ಖಾನೆಯವರು ಏನು ಹೇಳುತ್ತಾರೆ ಅಂದರೆ, ಸರ್ಕಾರ 600 ರೂಪಾಯಿ ಕೊಡಿ ಎಂದು ಹೇಳಿದೆ. ಆಮೇಲೆ ಏನೂ ತೀರ್ಮಾನ ಮಾಡದೇ ಇರುವುದರಿಂದ ಕೊಡುವುದಕ್ಕೆ ಬರುವುದಿಲ್ಲ ಎಂದು ಹೇಳುತ್ತಾರೆ. ಸಹಕಾರಿ ಕ್ಷೇತ್ರದಲ್ಲಿ 600 ರೂಪಾಯಿ 730-740 ರೂಪಾಯಿ ಕೊಡುತ್ತಿದ್ದಾರೆ. ಖಾಸಗಿ ಕಾರ್ಖಾನಗಳವರು ಏನು ಹೇಳುತ್ತಿದ್ದಾರೆ ಅಂದರೆ ಸರ್ಕಾರ ನಮಗೆ ಏನೂ ಆದೇಶ ಕೊಡದೇ ಇರುವುದರಿಂದ 600 ರೂಪಾಯಿ ಮೇಲೆ ಕೊಡುವುದಿಲ್ಲ ಎಂದು ಹೇಳುತ್ತಾರೆ. ಅವರನ್ನು ಕರೆದು ಮಾತನಾಡತಕ್ಕಂಥ ವಿಚಾರದ ಬಗ್ಗೆ ತಾವು ಪ್ರಸ್ತಾಪ ಮಾಡಬೇಕು.

ಶ್ರೀ ಉಮೇಶ್ ಎಸ್. ಕಟ್ಟಿ : ಮಾನ್ಯ ಅಧ್ಯಕ್ಷರೇ, ಪುಟ್ಟಣ್ಣಯ್ಯನವರು ಹೇಳಿದ ಹಾಗೆ ಹೈ ಪವರ್ ಕಮಿಟಿಯನ್ನು ಅಕ್ಟೋಬರ್ ಮತ್ತು ನವೆಂಬರ್ ತಿಂಗಳಲ್ಲಿ ಎರಡು ಮೂರು ಸಲ ಮೀಟಿಂಗ್ ಮಾಡಿ ಆ ಭಾಗದಿಂದ ಬರತಕ್ಕಂಥ ರೈತರನ್ನು ಮತ್ತು ಶಾಸಕರನ್ನು ಕರೆದು ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಒಂದು ಮೀಟಿಂಗ್ ಮಾಡಿ ಅವರ ಅಭಿಪ್ರಾಯಗಳನ್ನು ತಿಳಿದುಕೊಂಡಿದ್ದೇವೆ. ಒಂದೇ ಒಂದು ಕಾರಣ ಎಸ್.ಎಸ್.ಪಿ. ಏನು ಕೇಂದ್ರ ಸರ್ಕಾರ ನಿಗಧಿ ಮಾಡಬೇಕು ಅದನ್ನು ಇನ್ನೂ ನಿಗಧಿ

ಮಾಡಿಲ್ಲ ಆ ಕಾರಣದಿಂದ ನಾವು ಇಲ್ಲಿ ಎಸ್.ಎ.ಪಿ. ಮಾಡಲು ಆಗದೇ ಇರುವ ಕಾರಣ ನಾವು 600ರೂಪಾಯಿಗಳು ಮುಂಗಡ ಹಣ ರೈತರಿಗೆ ಕೊಡಬೇಕೆಂದು ಹೇಳಿದ್ದೇವೆ. ಮಾನ್ಯ ಪುಟ್ಟಣ್ಣಯ್ಯನವರು ಹೇಳಿದ ಹಾಗೇ ಲೆವಿ ಶುಗರ್ ಬೆಲೆ ಎರಡು ಸಲ ಜಾಸ್ತಿ ಮಾಡಿದ್ದಾರೆಂದು ಹೇಳಿದ್ದಾರೆ. ಎಸ್.ಎಂ.ಪಿ. ಫಿಕ್ಸ ಮಾಡಬೇಕಾದರೆ ಲೆವಿ ಬೆಲೆ ಎಷ್ಟು ಜಾಸ್ತಿ ಆಗಿದೆಯೋ ಅದನ್ನು ನೋಡಿ ರೈತರು ಬೆಳೆಯುವಂತಹ ಕಬ್ಬಿಗೆ ಎಷ್ಟು ಖರ್ಚಾಗುತ್ತದೆ ಎನ್ನುವುದನ್ನು ನೋಡಿ ಅದರ ಜೋತೆಗೆ ಓಪನ್ ಮಾರ್ಕೇಟ್‌ನಲ್ಲಿ ಸಕ್ಕರೆ ಬೆಲೆ ಏನು ಇದೆ ಎನ್ನುವುದನ್ನು ನೋಡಿಕೊಂಡು ಎಸ್.ಎಂ.ಪಿ. ರೇಟು ಫಿಕ್ಸ ಮಾಡುತ್ತಾರೆ. ಅವರು ರೇಟು ಫಿಕ್ಸ ಮಾಡಿದ ತಕ್ಷಣ ನಾವು ಮಾಡಬೇಕೆಂದು ಕಾಯುತ್ತಾ ಇದ್ದೇವೆ. ಇದುವರೆಗೂ ಎಸ್.ಎಂ.ಪಿ. ಆಗದ ಕಾರಣ ಮಾನ್ಯ ಸದಸ್ಯರು ಹೇಳಿದ ಹಾಗೆ ರೈತರಿಗೆ ತೊಂದರೆ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಈ ಸದನ ಮುಗಿದ ತಕ್ಷಣ ಎಸ್.ಎ.ಪಿ.ಗಳಿಗೆ ಎಲ್ಲಾ ಸಕ್ಕರೆ ಕಾರ್ಖಾನೆಗಳಿಗೆ ಆದೇಶ ಕೊಟ್ಟು ಯಾವ ರೀತಿಯಲ್ಲಿ ಹಣ ಕೊಡಬೇಕು ಎನ್ನುವ ಆದೇಶವನ್ನು ಕೊಡುತ್ತೇನೆಂದು ನಾನು ತಮ್ಮ ಮುಖೇನ ಮಾನ್ಯ ಸದಸ್ಯರಿಗೆ ತಿಳಿಸುತ್ತೇನೆ. ರೈತರಿಗೆ ಏನು ಬಾಕಿ ಹಣ ಕೊಡಬೇಕಾಗಿದೆ ಆ ಬಾಕಿ ಹಣವನ್ನು ಕೊಡಿಸುತ್ತೇನೆಂದು ಹೇಳಿದ್ದೇನೆ. ಮಾನ್ಯ ಹಿರಿಯ ಸದಸ್ಯರಾದ ಈಶ್ವರಪ್ಪನವರು ಹೇಳಿದಂತೆ ದೇವಿ ಸಕ್ಕರೆ ಕಾರ್ಖಾನೆಯ ವ್ಯವಸ್ಥಾಪಕ ನಿರ್ದೇಶಕರಿಗೆ ಅರೆಸ್ಟ ಮಾಡಿಲ್ಲ ಎಂದು ಹೇಳಿದ್ದಾರೆ, ಅವರ ಮೇಲೆ ಸುಮಾರು 11 ರಾಜ್ಯಗಳಿಂದ ನನ್ನ ಮಾಹಿತಿ ಪ್ರಕಾರ 11 ಹೈಕೋರ್ಟ್‌ಗಳಿಂದ ನೋಟಿಸಗಳು ಜಾರಿಯಲ್ಲಿವೆ. ಅವರು ಬೆಂಗಳೂರಿನ ಹೋಟೆಲನಲ್ಲಿ ಪ್ರೆಸ್ ಮೀಟಿಂಗ್ ಮಾಡಿದ್ದಾರೆಂದು ಹೇಳುತ್ತಾರೆ. ಅವರು ಎಲ್ಲಿದ್ದಾರೆ ಎನ್ನುವುದನ್ನು ನಮ್ಮ ಗಮನಕ್ಕೆ ತಂದರೆ, ಅವರನ್ನು ಕೂಡಲೇ ಅರೆಸ್ಟ ಮಾಡುವಂತಹ ಕ್ರಮ ನಾವು ತೆಗೆದುಕೊಳ್ಳುತ್ತೇವೆ ಎನ್ನುವಂತಹ ಮಾತನ್ನು ಹೇಳುತ್ತೇನೆ. ಅವರು ಒಂದೇ ರಾಜ್ಯದಲ್ಲಿ ಇರುವುದಿಲ್ಲ.

ಶ್ರೀ ಕೆ.ಎಸ್. ಈಶ್ವರಪ್ಪ : ಆತ ಪಂಚತಾರಾ ಹೋಟೆಲನಲ್ಲಿ ಪ್ರೆಸ್ ಮೀಟಿಂಗ್ ಮಾಡಿದ್ದಾನೆ ಅವನನ್ನು ನಾನು ಹಿಡಿದುಕೊಡಬೇಕೆನ್ನುವ ಸ್ಥಿತಿ ಈ ಸರ್ಕಾರಕ್ಕೆ ಬಂದಿದೆ ಅಂದರೆ, ನಾನು ಏನು ಮಾಡಬೇಕು ಹೇಳಿ ಸಾರ್.

ಶ್ರೀ ಉಮೇಶ್ ಎಸ್.ಕಟ್ಟಿ : ತಾವು ಹೋಗಿ ಹಿಡಿಯಿರಿ ಎಂದು ನಿಮಗೆ ತಿಳಿಸುತ್ತಿಲ್ಲ. ತಾವು ಸಹಕಾರ ಮಾಡಿ ಎಂದು ಕೇಳಿಕೊಳ್ಳುತ್ತಿದ್ದೇನೆ. ಅವರ ಮೇಲೆ 11 ರಾಜ್ಯಗಳಿಂದ ನೋಟಿಸಗಳು ಇರುವುದರಿಂದ ಅವರು ಎಲ್ಲಿರುತ್ತಾರೆ ಎನ್ನುವುದು ಗೊತ್ತಾಗುವುದಿಲ್ಲ. ಅವರು ಕರ್ನಾಟಕದಲ್ಲಿ ಇರುವ ಮಾಹಿತಿಯನ್ನು ಸರ್ಕಾರಕ್ಕೆ ಕೊಟ್ಟರೆ, ನಾನು ಅವರನ್ನು ಹಿಡಿಸುವ ವ್ಯವಸ್ಥೆ ಮಾಡಿಸುತ್ತೇನೆ.

ಉಪಾಧ್ಯಕ್ಷರು : ಈಗ 1996-97ನೇ ಸಾಲಿನ ಪೂರಕ ಅಂದಾಜುಗಳಮೇಲೆ ಚರ್ಚೆ ಹಾಗೂ ಮತಕ್ಕೆ ಹಾಕುವುದು.